REVIEW OF RESEARCH
IMPACT FACTOR : 5.7631(UIF) UGC APPROVED JOURNAL NO. 48514 ISSN: 2249-894X
VOLUME - 8 | ISSUE - 7 | APRIL - 2019

# ಹೈದ್ರಾಬಾದ ಕರ್ನಾಟಕ ವಿಮೋಚನೆಯಲ್ಲಿ ಮಹಿಳೆಯರ ಪಾತ್ರ ಮತ್ತು ರಾಜಕೀಯ ಭಾಗವಹಿಸುವಿಕೆ



ಪ್ರೊ. ಭಾರತಿ ಎಚ್. ಮಣ್ಣೂರ[1] ,ಡಾ// ಜಿ. ಬಿ. ನಂದನ[2]
[1]ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ ಸ.ಪ್ರ.ದ ಕಾಲೇಜ್ ಮುಳಗುಂದ .
[2]ನಿವೃತ್ತ ಪ್ರವಾಚಕರು, ರಾಜ್ಯಶಾಸ್ತ್ರ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
*ಪ್ರೊ. ಭಾರತಿ ಎಚ್. ಮಣ್ಣೂರ.

## ಅಮೂರ್ತ:(Abstract)

ಹೈದ್ರಾಬಾದ ಕರ್ನಾಟಕವು ಐತಿಹಾಸಿಕತೆಯಲ್ಲಿ ತನ್ನದೆಯಾದ ಆಗಾದ ಇತಿಹಾಸವನ್ನು ಒಳಗೊಂಡಿದೆ. ಬ್ರಿಟೀಷ್ ಪ್ರಭುತ್ವದ ವಿರುದ್ಧ ಹೋರಾಟ ಹಾಗೂ ನಿಜಾಮನ ದಬ್ಬಾಳಿಕೆಯ ಆಳ್ವಿಕೆಯ ವಿರುದ್ಧ ಹೋರಾಟ ಕುರಿತಂತೆ ಹೈದ್ರಾಬಾದ ಕರ್ನಾಟಕವು ಮಹತ್ವರವಾದ ಪಾಲನ್ನು ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಭಾರತ ಏಕೀಕರಣದಲ್ಲಿ ಹೊಂದಿದೆ. ಭಾರತವು 1947 ಅಗಸ್ಟ್ 15 ರಂದು ಸ್ವಾತಂತ್ರ್ಯಗೊಂಡಾಗ ಹೈದ್ರಬಾದ ಕರ್ನಾಟಕ ಪ್ರದೇಶವು ನಿಜಾಮನ ಆಳ್ವಿವಿಕೆಗೆ ಒಳಪಟ್ಟಿತ್ತು. ಇದನ್ನು ಪಾಕಿಸ್ತಾನ ಮತ್ತು ಇತರೆ ಭಾರತ ವಿರೋಧ ಹಿತಾಶಕ್ತಿಗಳು ಸ್ವತಂತ್ರ ರಾಷ್ಟ್ರವಾಗಿಸಲು ಹೊರಟಿದ್ದವು. ಈ ಹಂತದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶವನ್ನು ಭಾರತದ ಒಕ್ಕೂಟಕ್ಕೆ ಸೇರಿಸಲು ಸುಮಾರ ಹದಿಮೂರು ತಿಂಗಳಗಳ ಕಾಲ ಒಂದು ವಿಮೋಚನಾ ಹೋರಾಟವೆ ನಡೆಯಿತು. ಈ ಹೋರಾಟದಲ್ಲಿ ಅನೇಕ ಶೈಕ್ಷಣಿಕ ಸಂಸ್ಥೆಗಳು, ಸಂಘಟನೆಗಳು, ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ಹಾಗೂ ರೈತರು ಪಾಲ್ಗೊಂಡು, ನಿಜಾಮನ ಆಳ್ವಿವಿಕೆಯ ವಿರುದ್ಧ ಹಾಗೂ ರಜಾಕಾರರ ದಬ್ಬಾಳಿಕೆ ವಿರುದ್ಧ ಧ್ವನಿ ಎತ್ತಿ ಹೈದ್ರಾಬಾದ್ ಕರ್ನಾಟಕವನ್ನು ನಿಜಾಮನ ಕಪಿಮುಷ್ಠಿಯಿಂದ ವಿಮೋಚನೆಗೊಳಿಸಿಲು ಶ್ರಮಿಸಿದ್ದಾರೆ. ಈ ಹಿನ್ನಲೆಯಲ್ಲಿ ಹೈದ್ರಾಬಾದ ಕರ್ನಾಟಕ ವಿಮೋಚನೆಯ ಹೋರಾಟದಲ್ಲಿ ಮಹಿಳೆಯರ ಪಾತ್ರವನ್ನು ಕೇಂದ್ರಿಕರಿಸುವ ಜೊತೆಗೆ ಪ್ರಸ್ತುತ ಆ ಭಾಗದ ಮಹಿಳಾ ರಾಜಕೀಯ ಭಾಗವಿಸುವಿಕೆಯ ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**ಮುಖ್ಯ ಪದಗಳು(Key Words):** ಹೈದ್ರಾಬಾದ ಕರ್ನಾಟಕ ವಿಮೋಚನೆ, ಹೋರಾಟ, ಆಳ್ವಿಕೆ, ಏಕೀಕರಣ, ಒಕ್ಕೂಟ, ಮಹಿಳೆ, ಪ್ರಾಂತ್ಯ ಮತ್ತು ಸಂಘಟಿತತೆ.

## ಪ್ರಸ್ತಾವನೆ(Introduction)

ಹೈದ್ರಾಬಾದ್ ಕರ್ನಾಟಕ ಪ್ರದೇಶವು ಒಂದು ವಿಶೇಷವಾದ ಚ್ಯಾರಿತ್ರಿಕ ಹಿನ್ನಲೆಯನ್ನು ಹೊಂದಿದೆ. ಈ ಭಾಗವನ್ನು ಸ್ವತಂತ್ರ ಭಾರತದ ಒಕ್ಕೂಟಕ್ಕೆ ಸೇರಿಸಲು ಸ್ಥಳೀಯ ಪ್ರಜೆಗಳು, ವಿದ್ಯಾ ಸಂಸ್ಥೆಗಳು, ವಿದ್ಯಾರ್ಥಿಗಳು, ಯುವಕರು, ರೈತರು ಹಾಗೂ ಮಹಿಳೆಯರು ಅನೇಕ ಹೋರಾಟಗಳನ್ನು ಮಾಡಿದ್ದಾರೆ. ನಿಜಾಮನ ದಬ್ಬಾಳಿಕೆಯ ಆಳ್ವಿವಿಕೆಗೆ ಗುರಿಯಾಗಿದ್ದಾರೆ. ಈ ಹಿನ್ನಲೆಯಲ್ಲಿ ಹೈದ್ರಾಬಾದ್ ಕರ್ನಾಟಕ ವಿಮೋಚನಾ ಹೋರಾಟದಲ್ಲಿ ಮಹಿಳೆಯರ ಪಾತ್ರವನ್ನುಮತ್ತು ಮಹಿಳೆಯರು ಸಂಘಟಿತ, ಅಸಂಘಟಿತವಾಗಿ ತೋರಿದ ಹೋರಾಟದ ದಿಟ್ಟ ಹೆಜ್ಜೆ ಗುರುತುಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

## ಹೈದ್ರಾಬಾದ್ ಕರ್ನಾಟಕ ವಿಮೋಚನೆಯ ಸಂಕ್ಷೀಪ್ತ ಐತಿಹಾಸಿಕ ಹಿನ್ನಲೆ: (Historical Bckground)

ಹೈದ್ರಾಬಾದ್ ಕರ್ನಾಟಕ ವಿಮೋಚನೆಯ ಹೋರಾಟವನ್ನು ಒಂದು ವಾಕ್ಯ ಅಥವಾ ಒಂದು ಪುಟದಲ್ಲಿ ವಿವರಣೆಯನ್ನು ನೀಡಲು ಸಾಧ್ಯವಿಲ್ಲ. ಏಕೆಂದರೆ ಇದೊಂದು ವಿಶೇಷವಾದ ಹೋರಾಟದ ಐತಿಹಾಸಿಕತೆಯನ್ನು ಒಳಗೊಂಡಿದೆ. ಭಾರತವು 1947 ಅಗಸ್ಟ್ 15 ರಂದು ಸ್ವಾತಂತ್ರ್ಯವನ್ನೇನೂ ಹೊಂದಿತು. ಆದರೆ ಸಮಾರು 562 ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದ ಭಾರತವನ್ನು ಒಂದುಗೊಡಿಸುವುದು ಒಂದು ದೊಡ್ಡ ಸವಾಲಾಗಿತ್ತು. ಈ ಸವಾಲನ್ನು ಸರ್ದಾರ ವಲ್ಲಭಭಾಯಿ ಪಟೇಲರು ಸ್ವಿಕರಿಸಿ ಇವುಗಳಲ್ಲಿ ಬಹುತೇಕ ಪ್ರಾಂತ್ಯಗಳನ್ನು ಭಾರತದ ಒಕ್ಕೊಟಕ್ಕೆ ಸೇರಿಸಿದರು. ಆದರೆ ಹೈದ್ರಾಬಾದ್ ಕರ್ನಾಟಕ ಪ್ರದೇಶ ಮತ್ತು ಕಾಶ್ಮೀರವನ್ನು ಭಾರತದ ಒಕ್ಕೂಟಕ್ಕೆ ಸೇರಿಸಲು ದೊಡ್ಡ ಮಟ್ಟದ ಹೋರಾಟವನ್ನು ಮಾಡಬೇಕಾಯಿತು. ಕುರಿತಂತೆ ಸರ್ದಾರ ವಲ್ಲಭಭಾಯಿ ಪಟೇಲರು ಸ್ಥಳೀಯರಲ್ಲಿ ಹೈದ್ರಾಬಾದ್ ಕರ್ನಾಟಕ ವಿಮೋಚನೆ ಹೋರಾಟದ ಸಂಘಟಿತತೆಯನ್ನು ಮೂಡಿಸಿದರು. ವಿದ್ಯಾ ಸಂಸ್ಥೆಗಳು, ವಿದ್ಯಾರ್ಥಿಗಳು, ಯುವಕರು, ಹಾಗೂ ಸ್ಥಳೀಯ ಕಾಂಗ್ರೇಸ್ ನಾಯಕರಲ್ಲಿ ಹೋರಾಟದ ಕಿಚ್ಚನ್ನು ಹೊತ್ತಿಸಿದರು. ಇದರ ಭಾಗವಾಗಿ ಸ್ವಾಮಿ ರಮಾನಂದ ತೀರ್ಥರು, ಅನ್ನದಾನ್ಯಯ ಪುರಾಣಿಕ, ಶಿವಮೂರ್ತಿಸ್ವಾಮಿ ಅಳವಂಡಿ, ಪ್ರಭುರಾಜ ಪಾಟೀಲ, ಡಾ. ಚುರ್ಚಿಹಾಳಮಠ, ಪಂಚಾಕ್ಷರಿ ಹಿರೇಮಠ, ಬೆಟಗೇರಿ ವಿರುಪಾಕ್ಷಪ್ಪ, ಶರಣಬಸರಾಜ ಬಿಸರಳ್ಳಿ, ಅಯೋಧ್ಯ

ರಾಮಾಚಾರಿ, ಬಿ. ಕಿಸೆನ್‌ರಾವ್, ಶಿವಬಸಯ್ಯ ಹಂಚಿನಾಳ, ಮುರಡಿ ಭೀಮಜ್ಜ, ಪುಂಡಲಿಕಪ್ಪ ಜ್ಞಾನಮೋಟಿ ಮತ್ತು ಜಯತೀರ್ಥ ರಾಜಪುರೋಹಿತ ಮೊದಲಾದವರು ಹೋರಾಟದಲ್ಲಿ ದುಮುಖಿ ಮುಂಡರಗಿ, ಕುಕನೂರ, ಗಜೇಂದ್ರಗಡ ಮತ್ತು ಇಟಗಿಯಲ್ಲಿ ಅನೇಕ ಹೋರಾಟ ಶಿಬಿರಗಳನ್ನು ಕಟ್ಟಿಕೊಂಡು ಹೈದ್ರಾಬಾದ್ ಕರ್ನಾಟಕದ ವಿಮೋಚನೆಗೆ ನೆರವಾದರು. ಕೊನೆಗೆ ಭಾರತವು ಸಪ್ಟಂಬರ 13, 1948 ರಂದು ಸೇನಾ ಕಾರ್ಯಚರಣೆಯನ್ನು ಕೈಗೊಂಡು ನಿಜಾಮನ ಸೇನೆಯನ್ನು ಸಪ್ಟಂಬರ 17 ರಂದು ಸೋಲಿಸುವ ಮೂಲಕ ಹೈದ್ರಾಬಾದ್ ಕರ್ನಾಟಕವನ್ನು ನಿಜಾಮನ ಆಳ್ವಿಕೆ ಮತ್ತು ರಜಾಕರ ದಬ್ಬಾಳಿಕೆಯಿಂದ ವಿಮೋಚನೆಗೊಳಿಸಿ ಭಾರತದ ಒಕ್ಕೂಟಕ್ಕೆ ಸೇರಿಸಿತು.

## ಹೋರಾಟದಲ್ಲಿ ಮಹಿಳೆಯರ ಪಾತ್ರ(The Role of Women In The Emancipation Fight)

ಹೈದ್ರಾಬಾದ್ ಕರ್ನಾಟಕ ವಿಮೋಚನೆಯ ಹೋರಾಟದಲ್ಲಿ ಅನೇಕ ಮಹಿಳೆಯರು ಸಂಘಟಿತ ಮತ್ತು ಅಸಂಘಟಿತವಾಗಿ ಹೋರಾಡಿದ್ದಾರೆ. ಇವರ ಹೋರಾಟವನ್ನು ಐತಿಹಾಸಿಕವಾಗಿ ಗುರಿತಿಸಲು ಇತಿಹಾಸಕಾರರಿಗೆ ಮತ್ತು ಸಂಶೋಧಕರಿಗೆ ಕಷ್ಟದಾಯಕವಾಗಿದೆ. ಏಕೆಂದರೆ ಇವರ ಬಗೆಗೆ ಅಸ್ಪಷ್ಟ ಮಾಹಿತಿ ಇದೆ. ಆದರೆ ಈ ಪ್ರದೇಶದ ವಿಮೋಚನೆಯ ಹೋರಾಟದಲ್ಲಿ ಇವರ ಪಾತ್ರವನ್ನು ಮರೆಯುವಂತಿಲ್ಲ. ಹೈದ್ರಾಬಾದ್ ಕರ್ನಾಟಕ ವಿಮೋಚನಾ ಹೋರಾಟದಲ್ಲಿ ಮಹಿಳೆಯರ ಪಾತ್ರವನ್ನು 3 ರೀತಿಯಲ್ಲಿ ಗುರಿತಿಸಬಹುದು.

- ಅಹಿಂಸಾತ್ಮಕ ಹೋರಾಟ
- ಆತ್ಮರಕ್ಷಣೆಗಾಗಿ ಸಂಘಟನೆ
- ಗುಪ್ತಚರ ಮಾಹಿತಿ ಒಪ್ಪಿಸುವಿಕೆ

1946 ಸಂದರ್ಭದಲ್ಲಿ ಈ ಪ್ರದೇಶದಲ್ಲಿ ನಿಜಾಮನ ಹಾಗೂ ಅವನ ರಜಾಕರುಗಳ ಹಾವಳಿವು, ದಬ್ಬಾಳಿಕೆವು ಹೆಚ್ಚಾಗಿತ್ತು. ನಿಜಾಮನ ರಜಾಕರುಗಳು ಮತ್ತು ಪೋಲಿಸರು ಮಹಿಳೆಯರ ಮೇಲೆ ದಬ್ಬಾಳಿಕೆ ಹಾಗೂ ಹಿಂಸೆಯನ್ನು ಮಾಡುವುದಲ್ಲದೆ, ಅತ್ಯಾಚಾರವನ್ನು ಎಸಗುತ್ತಿದ್ದರು. ಈ ಸಂದರ್ಭದಲ್ಲಿ ಮಹಿಳೆಯರು ಸಂಘಟಿತಗೊಂಡು ಹೋರಾಟವನ್ನು ಆರಂಭಿಸಿದರು ಅವರುಗಳಲ್ಲಿ ಅಕ್ಕಮ್ಮ ಮಹಾದೇವಿ, ರಟ್ಟಗಲ್ಲ ಸೊಗಮ್ಮ, ಹಟ್ಟಿ ಗುರಬಸವ್ವ, ಬಡಿಗೇರ ಸೀತಮ್ಮ, ಕರಬಸಮ್ಮ, ಮಾನಗಾಂವ್ ಶಾಂತವ್ವ, ಶಾವವ್ವ, ಬಾದಿಮಾನಾಳ ದುರ್ಗಮ್ಮ ಮತ್ತು ಲಕ್ಷ್ಮವ್ವ ಮೂದಲಾದವರು ಗಾಂಧಿ ಟೋಪಿಯನ್ನು ಧರಿಸಿ ನಿಜಾಮ ಮತ್ತು ರಜಾಕರುಗಳ ವಿರುದ್ಧ ಅಹಿಂಸಾತ್ಮಕ ಹೋರಾಟದಲ್ಲಿ ತೋಡಗಿದ್ದರು.

ಮಹಿಳೆಯರು ಹೋರಾಟದ ಎರಡನೇ ಭಾಗವಾಗಿ ಆತ್ಮರಕ್ಷಣೆಯ ಸಂಘಟನೆಯಲ್ಲಿ ತೊಡಗಿದರು. ಏಕೆಂದರೆ ಈ ಅವಧಿಯಲ್ಲಿ ನಿಜಾಮನ ರಜಾಕರುಗಳಿಂದ, ಪೋಲಿಸರುಗಳಿಂದ ಮಹಿಳೆಯರ ಮೇಲೆ ಅತ್ಯಾಚಾರಗಳಾಗಿವೆ ಈ ಕಾರಣದಿಂದ ಮಹಿಳೆಯರು ಆತ್ಮರಕ್ಷಣೆಗಾಗಿ ಸಂಘಟಿತಗೊಂಡರು. ರಜಾಕರುಗಳ, ನಿಜಾಮನ ಪೋಲಿಸರ ಬರುವಿಕೆಯನ್ನು ನೋಡಿಕೊಂಡು ಸಾಮೂಹಿಕವಾಗಿ ಮನೆಯ ಮಹಡಿಗಳನ್ನು ಏರಿ ಕಾದ ಎಣ್ಣೆಯನ್ನು ಇವರುಗಳ ಮೇಲೆ ಸುರಿಯುತ್ತಿದ್ದರು. ಇನ್ನೂ ಹೋರಾಟದ ಶಿಬಿರಗಳಿಗೆ ನಿಜಾಮನ ಆಳ್ವಿಕೆಯ ಗುಪ್ತಚರ ಮಾಹಿತಿಯನ್ನು ತಲುಪಿಸುವದರೊಂದಿಗೆ ಹೋರಾಟದ ಭಾಗವಾಗಿ ಅನೇಕ ಮಹಿಳೆಯರು ಗುರುತಿಸಿಕೊಂಡಿದ್ದರು. ಅವರುಗಳಲ್ಲಿ ಹಾಲು ಮೊಸರು ಮಾರಲು ಹಳ್ಳಿಗಳಿಗೆ ತಿರುಗುತ್ತಿದ್ದ ಮಹಿಳೆಯರೆ ಹೆಚ್ಚಿದ್ದರು. ಮುಂಡರಗಿ ರಾಮಕ್ಕ, ರಬಕರಿ ಮಲ್ಲಮ್ಮ, ತೋಪೆ ಭೀಮವ್ವ ಮತ್ತು ದನಗಾಯಿ ಸಕ್ಕವ್ವ ಗುಪ್ತಚರ ಮಾಹಿತಿಯನ್ನು ಒಪ್ಪಿಸುವಲ್ಲಿ ಪ್ರಮುಖರಾಗಿದ್ದರು. ಹಾಗೂ ಕೂಪ್ಪಳ ತಾಲೂಕಿ ಬೆಟಗೇರಿ ಗ್ರಾಮದ ತಾಯಿ ಶಾವವ್ವ ಮತ್ತು ಮಗಳು ಲಕ್ಷ್ಮವ್ವ ಪಾತ್ರದ ಜೋಗಮ್ಮರಾಗಿ ಬೆಟಗೇರಿ, ಅಳವಂಡಿ ಗ್ರಾಮಗಳಲ್ಲಿದ್ದ ರಜಾಕಾರರ ಕ್ಯಾಂಪಿನ ಚಟುವಟಿಕೆಗಳ ಮಾಹಿತಿಯನ್ನು ಗುಪ್ತವಾಗಿ ಮುಂಡರಗಿ ಶಿಬಿರಗಳಿಗೆ ಮುಟ್ಟಿಸುತಿದ್ದರು.

## ಪ್ರಸ್ತುತಾ ಮಹಿಳಾ ರಾಜಕೀಯ ಭಾಗವಹಿಸುವಿಕೆ:Currenty Women Political Participation)

ಹೈದ್ರಾಬಾದ ಕರ್ನಾಟಕದ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಮತ್ತು ರಾಜಕೀಯ ಸಂಘಟಿತತೆಯು ತಕ್ಕ ಮಟ್ಟದಲ್ಲಿ ಇಲ್ಲ. ಇಲ್ಲಿ ಕೂಡಾ ಪುರುಷ ಪ್ರಧಾನವಾದ ರಾಜಕೀಯತೆ ಇದೆ. 1950 ರ ದಶಕದಿಂದ ಇಲ್ಲಿಯವರಿಗೂ ಪುರುಷ ಸಮಾನವಾದ ರಾಜಕೀಯ ಭಾಗವಹಿಸುವಿಕೆಯನ್ನು ಗುರುತಿಸಲು ಸಾಧ್ಯವಿಲ್ಲ. ಸಂವಿಧಾನಿಕ ತಿದ್ದುಪಡೆ 73 ಮತ್ತು 74 ನೇಯ ಅನುಸಾರ ಸ್ಥಳೀಯ ಸರ್ಕಾರ ಚುನಾವಣೆಯಲ್ಲಿ ಶೇ. 33 ರಷ್ಟು ಮಹಿಳಾ ಮೀಸಲಾತಿಯನ್ನು ಕಲ್ಪಿಸಿದ್ದರೂ ವ್ಯವಸ್ಥಿತವಾದ ರಾಜಕೀಯ ಸಂಘಟಿತತೆಯನ್ನು ಇಲ್ಲಿ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಈ ನಿಟ್ಟಿನಲ್ಲಿ ಕರ್ನಾಟಕ ಸರಕಾರವು ಮಹಿಳಾ ರಾಜಕೀಯ ಭಾಗವಹಿಸಿವಿಕೆ ಹಾಗೂ ಮುಕ್ತವಾಗಿ ರಾಜಕೀಯ ನಿರ್ಣಯವನ್ನು ಕೈಗೊಳ್ಳಲು ಸ್ಥಳೀಯ ಚುನಾವಣಾಗಳಲ್ಲಿ ಶೇ. 50 ರಷ್ಟು ಮೀಸಲಾತಿಯನ್ನು ಕಲ್ಪಿಸಿದೆ. ಆದರೂ ಕೂಡಾ ಸ್ಥಳೀಯ ಸಂಸ್ಥೆ, ವಿಧಾನಸಭಾ, ಲೋಕಸಭಾ ಚುನಾವಣೆ ಕುರಿತಂತೆ ಮಹಿಳಾ ರಾಜಕೀಯ ಸಂಘಟಿತತೆ ಹಾಗೂ ಭಾಗವಿಸುವಿಕೆಯು ಹೆಚ್ಚಾಗಬೇಕಾಗಿದೆ.

### ಮಹಿಳಾ ಸಕ್ರೀಯ ರಾಜಕೀಯ ಪಾಲ್ಗೊಳ್ಳುವಿಕೆಗಿರುವ ಸಮಸ್ಯೆಗಳು:– (Problems With Womens Active Political Participation)

ಮಹಿಳೆಯರು ಸಂಪೂರ್ಣವಾಗಿ ಪುರುಷ ಸಮಾನ ರಾಜಕೀಯ ಕ್ರೀಯಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳನ್ನು ಹಾಗೂ ಸವಾಲುಗಳನ್ನು ಪ್ರಸ್ತುತ ವ್ಯವಸ್ಥೆಯಲ್ಲಿ ಗುರುತಿಸಬಹುದಾಗಿದೆ. ಅವುಗಳಲ್ಲಿ ಪುರುಷ ಪ್ರಧಾನ ಸಮಾಜದ ಧೋರಣೆ, ಲಿಂಗ ತಾರತಮ್ಯ, ಅನಕ್ಷರತೆ, ರಾಜಕೀಯ ಪಕ್ಷಗಳ ನಿರಾಕರಣೆ, ಲೈಂಗಿಕ ಹಿಂಸೆ, ಚುನಾವಣಾ ನಿರ್ಬಂಧನೆಗಳು ಪ್ರಮುಖವಾದವುಗಳಾಗಿವೆ.

## ತೀರ್ಮಾನ:–(Decision)

ಹೈದ್ರಾಬಾದ ಕರ್ನಾಟಕ ವಿಮೋಚನಾ ಹೋರಾಟದಲ್ಲಿ ಮಹಿಳೆಯರ ಪಾತ್ರವನ್ನು ಅನರ್ಘ್ಯವಾಗಿ ಗುರುತಿಸಬಹಿದಾದರೂ ಅವರ ಪ್ರಮುಖ ಪಾತ್ರವನ್ನು ದಾಖಲಿಸುವ ಕೆಲಸ ಆಗಬೇಕಾಗಿದೆ. ಸ್ವಾತಂತ್ರ್ಯ ಹೋರಾಟ ಮತ್ತು ವಿಮೋಚನಾ ಹೋರಾಟದಲ್ಲಿ ಕಾಣಬಹುದಾಗಿದ್ದ ಮಹಿಳಾ ಹೋರಾಟ ಹಾಗೂ ರಾಜಕೀಯ ಸಂಘಟಿತತೆ ಪ್ರಸ್ತುತ ವ್ಯವಸ್ಥೆಯಲ್ಲಿ ಅಷ್ಟು ಮಟ್ಟದಲ್ಲಿ ಗುರಿತಿಸಲು ಸಾಧ್ಯವಿಲ್ಲ. ಈ ಭಾಗದಲ್ಲಿ

ಮಹಿಳಾಸಬಲೀಕರಣ ರಾಜಕೀಯತೆ ಹಾಗೂ ಮಹಿಳಾ ಸಂಪೂರ್ಣ ರಾಜಕೀಯ ಪಾಲ್ಗೊಳ್ಳುವಿಕೆಗೆ ತಲೆದೂರುವ ಸಮಸ್ಯೆಗಳನ್ನು ಪರಿಹರಿಸಲು "ಮಹಿಳಾ ಸಕ್ರೀಯ ರಾಜಕೀಯತೆಗೆ ಪೂರಕವಾದ ಸಾಮಾಜಿಕ ವಾತಾವರಣವು ಸೃಷ್ಟಿಯಾಗಬೇಕಾಗಿದೆ". ಇದರ ಜೊತೆಗೆ ಲಿಂಗ ಅಸಮಾನತೆ ಹಾಗೂ ಅನಕ್ಷರತೆಯನ್ನು ಹೋಗಲಾಡಿಸಬೇಕು. ಅಂದಾಗ ಮಾತ್ರ ಪುರುಷ ಸಮಾನವಾದ ಮಹಿಳಾ ರಾಜಕೀಯತೆನ್ನು ಹಾಗೂ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಕಾಣಬಹುದು ಮತ್ತು ಮಹಿಳಾ ಸಂಪೂರ್ಣ ರಾಜಕೀಯ ಪಾಲುದಾರಿಕೆಯಿಂದ ಸಮಾನ ಸಮಾಜದ ಸೃಷ್ಟಿ, ಅಭಿವೃದ್ಧಿ ಸಮಾಜದ ಸಮಾನ ಪ್ರಕ್ರೀಯೆಯು ವಿಕಸನಗೊಳ್ಳಬಹುದು.

### ಆಧಾರ ಗ್ರಂಥಗಳು:– (Reference Books)

1 ) ಡಾ. ಮರಕಿಣಿ ಎಂ. ವಿ., ನೂರು ಘಟನೆ ಸಾವಿರ ನೆನಪು, ಕನ್ನಡ ಸಾಹಿತ್ಯಾ ಪರಿಷತ್, ಬೆಂಗಳೂರ, 1998

2 ) ಮುನ್ಸಿ ಕೆ. ಎಂ., ದಿ ಎಂಡ್ ಆಫ್ ಎರಾ, ಕನ್ನಡ ಸಾಹಿತ್ಯಾ ಪರಿಷತ್, ಬೆಂಗಳೂರ, 1993

3 ) ಉಸ್ತಾದ ರಝಾಕ್, ಹ್ಯದ್ರಾಬಾದ ಕರ್ನಾಟಕ ಕಥೆ, ಕನ್ನಡ ಸಾಹಿತ್ಯಾ ಪರಿಷತ್, ಬೆಂಗಳೂರ, 2008

**4** ) Shukla, A . kumar-women in India politics :empowermemt of women through political participation. New delhi: gayan publising house, 2000.

5 ) Singh, A.K role of media in India democrasy. New delhi: pennacle technology, 2010

6 ) Narula, Uma. Indian women across generations. New delhi: atlantic publishers, 2005

7 ) ರೌಟ್ ಅಕ್ಷಯ್ "ಭಾರದತ ಚುನಾವಣೆಯ ಪ್ರಕೀಂಯೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ". ¨ಭಾರತದ ಚುನಾವಣಾ ಆಯೋಗ 2014.

8 ) ದಿ ಗ್ಲೋಬಲ್ ಜೆಂಡರ್ ಗ್ಯಾಪ್ ರಿಪೋರ್ಟ್. WEF 2012.

9 ) political econamy weekly, 2014.

LBP PUBLICATION